ಡಾ;ಎಂ.ಪಿ.ಕರ್ಕಿ (ಕುಮಟಾ):- ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಮನೆ ಕಟ್ಟಲು ಕೆಂಪು ಕಲ್ಲನ್ನು ಕಡಿದು ಉಪಯೋಗಿಸುತ್ತಾರೆ. ಇಲ್ಲಿ ಇಟ್ಟಿಗೆ ತಯಾರಿಸುವ ಮಣ್ಣು ಕೂಡ ದೊರಕುತ್ತಿಲ್ಲ. ಈ ಕಲ್ಲುಗಳನ್ನು cut later ಎಂದು ಕರೆಯುತ್ತಾರೆ. ಸರಕಾರ ಗ್ರೆನೈಟ್ ಕಲ್ಲುಗಳನ್ನು ತೆಗೆಯುವ ಪ್ರಕ್ರಿಯೆಯನ್ನು ಬಿಗಿಗೊಳಿಸಿದ್ದನ್ನು ಗಮನಿಸಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಲೆಟರೈಟ್ ಕಲ್ಲುಗಳನ್ನು ತೆಗೆಯಲೂ ಅರಣ್ಯ ಇಲಾಖೆ ಹಾಗೂ ಗಣಿ ಇಲಾಖೆ ಬಿಡುತ್ತಿಲ್ಲ. ಅಲ್ಲದೇ ಅಂಥವರ ಮೇಲೆ ಪೋಲೀಸ್ ಕೇಸು ದಾಖಲಿಸುತ್ತಿದ್ದಾರೆ. ಇದರಿಂದ ಮನೆ ಕಟ್ಟುವ ಪ್ರಕ್ರಿಯೆ ಸಂಪೂರ್ಣ ನಿಲ್ಲುವ ಸಂಭವವಿದೆ. ಸರಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಕಲ್ಲುಗಳನ್ನು ತೆಗೆಯಲು ಅನುಮತಿಯನ್ನು ಧಾರಾಳವಾಗಿ ನೀಡಬೇಕೆಂದು ಸರಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಡಿ.ಜಯರಾಮ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):- ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಮನೆ ಕಟ್ಟುವುದಕ್ಕಾಗಿ ಕೆಂಪು ಕಲ್ಲು, ಇಟ್ಟಿಗೆ ಮರಳು ಇತ್ಯಾದಿ ಉಪ ಖನಿಜಗಳನ್ನು ಉಪಯೋಗಿಸಿ ಗೃಹ ನಿರ್ಮಾಣ ಮಾಡುತ್ತಾರೆ. ಕಲ್ಲುಗಣಿ ಗುತ್ತಿಗೆಗಳಿಗಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ 236 ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದೆ. ಅರಣ್ಯ ಇಲಾಖೆಯಿಂದ ಉಪ ಖನಿಜಗಳಿಗಾಗಿ 25 ಕಲ್ಲು ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದೆ.

ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 8(2)ರ ಪ್ರಕಾರ ಅರಣ್ಯ ಪ್ರದೇಶದಲ್ಲಿ ಕಲ್ಲು ಗಣಿ ಗುತ್ತಿಗೆಗಳನ್ನು ನೀಡುವುದನ್ನು ನಿಷೇದಿಸಲಾಗಿದೆ. ಅಕ್ರಮ ಕಲ್ಲುಗಣಿಗಾರಿಕೆ ನಡೆಯುತ್ತಿದ್ದ ಸಂದರ್ಭಗಳಲ್ಲಿ ಅದನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅರ್ಜಿದಾರರು ಕಲ್ಲುಗಣಿ ಗುತ್ತಿಗೆಗಳ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದಲ್ಲಿ ಕಲ್ಲುಗಣಿ ಗುತ್ತಿಗೆಗಳನ್ನು ಕಾನೂನು ರೀತಿ ಮಂಜೂರು ಮಾಡಲಾಗುವುದು.

ಶಾಸನ ರಚನೆ

ವಿಧೇಯಕಗಳ ಮಂಡನೆ

ಶ್ರೀ ಎಂ.ಸಿ.ನಾಣಯ್ಯ:- ಅಧ್ಯಕ್ಷರೆ, ಕಂದಾಯ ಸಚಿವರ ಹೆಸರಿನಲ್ಲಿರುವ ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತಿದ್ದೇನೆ, ಈಗಾಗಲೇ ಅವರು ಪತ್ರ ಬರೆದು ತಮ್ಮ ಅನುಮತಿ ಕೋರಿದ್ದಾರೆ.

ಅಧ್ಯಕ್ಷರು:- ಆಯಿತು.

1995ನೇ ಸಾಲಿನ ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, 1995ರ ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ; ''1995ನೇ ಸಾಲಿನ ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.